ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ,
ಚಾವಿಸನಿನಿ, ಮೈಸೂರು-570017
ದೂರವಾಣಿ ಸಂಖ್ಯೆ -0821-2417106

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Corporate Office,CESC, Mysuru-570017
Website:https://cescmysore.karnataka.go
E-mail ID:-cfo@cescmysore.org

Company Identity Number[CIN]:- U40109KA2004SGC035177

ಕ್ರಮಾಂಕ : ಸೆಸ್ಕ್/ಮುಆಅ/ಪ್ರವ್ಯ/ಉಪ್ರವ್ಯ(ಲೆಕ್ಕ&ಕಂ)/ಸಪ್ರವ್ಯ(ಕಂ)/ವ್ಯ(ಕಂ)/2020-21
ಲಗತ್ತು:
ದಿನಾಂಕ: 08.12.2020

Cys-1268 15 DEC 20

## ಸುತ್ತೋಲೆ

ವಿಷಯ: ಗ್ರಾಹಕರು ತಮ್ಮ ವಿದ್ಯುತ್ ಖಾತೆಗೆ ನೇರವಾಗಿ NEFT/RTGS ಮೂಲಕ ಪಾವತಿಸಲು ಅವಕಾಶ ಕಲ್ಪಿಸಿರುವ ಬಗ್ಗೆ.

*****

ನಿಗಮವು ಈ ಹಿಂದೆ ಗ್ರಾಹಕರು ವಿದ್ಯುತ್ ಶುಲ್ಕವನ್ನು ತಮ್ಮ ಆರ್.ಆರ್. ಸಂಖ್ಯೆ/ಅಕೌಂಟ್ ಐಡಿಗೆ ಜಮೆಯಾಗುವಂತೆ ಪಾವತಿಸಲು ಅವಕಾಶವಿಲ್ಲದಿರುವುದರಿಂದ ನಿಗಮ ಕಛೇರಿಯ ಅನುಮೋದನೆ ಪಡೆದು ಉಪಯೋಗವಾಗದ ಚಾಲ್ತಿ ರಹಿತ ಖಾತೆಗೆ RTGS/NEFT ಮೂಲಕ ಪಾವತಿಸಲು ಅವಕಾಶ ನೀಡಲಾಗಿತ್ತು. ಗ್ರಾಹಕರು RTGS/NEFT ಮೂಲಕ ಪಾವತಿಸಿದ ಮೊತ್ತವನ್ನು ಯಾವ ಗ್ರಾಹಕರು ಪಾವತಿಸಿದ್ದಾರೆ ಎಂದು ಪರಿಶೀಲಿಸಿ ವಿವರ ಪಡೆದು ತದನಂತರ ರಶೀದಿಯನ್ನು ಡ್ರಾ ಮಾಡಿ RTGS/NEFT ಮೂಲಕ ಪಾವತಿಸಿದ ಗ್ರಾಹಕರ ಖಾತೆಗೆ ಜಮೆಗೊಳಿಸಲು ಕ್ರಮವಹಿಸಲಾಗುತ್ತಿತ್ತು. ಇದರಿಂದ ಗ್ರಾಹಕರ ಮಾಹಿತಿಯು ತಕ್ಷಣವೇ ಲಭ್ಯವಾಗದೆ/ಪಾವತಿಸಿದ ಗ್ರಾಹಕರು ಮಾಹಿತಿ ನೀಡದೆ ಇರುವುದರಿಂದ ಕೂಡಲೆ ಸಂಬಂಧಿಸಿದ ಗ್ರಾಹಕರ ಆರ್.ಆರ್. ಸಂಖ್ಯೆಗೆ/ಅಕೌಂಟ್ ಐಡಿಗೆ ರಶೀದಿ ಡ್ರಾ ಮಾಡಿ ಜಮಾಗೊಳಿಸಲು ಸಾಧ್ಯವಾಗದೆ ಸದರಿ ಮೊತ್ತವನ್ನು Revenue Suspense ಅಥವಾ Erronious Debits by the Banks ಎಂದು ಲೆಕ್ಕಶೀರ್ಷಿಕೆ 47.607/46.971/46.974 ನಲ್ಲಿ ಲೆಕ್ಕೀಕರಿಸಲಾಗುತ್ತಿತ್ತು.

ಇದರಿಂದ ಗ್ರಾಹಕರು RTGS/NEFT ಮೂಲಕ ಪಾವತಿಸಿದ ದಿನವೆ ಸಂಬಂಧಿಸಿದ ಆರ್.ಆರ್ ಸಂಖ್ಯೆ/ಆಕೌಂಟ್ ಐಡಿ ಗೆ ಜಮಾಗೊಳಿಸಲು ಸಾಧ್ಯವಾಗದೆ ಗ್ರಾಹಕರಿಂದಲು ಆಕ್ಷೇಪಣೆಗಳು ಬರುತ್ತಿದ್ದವು ಹಾಗೂ ಅಂತಿಮ ಲೆಕ್ಕ ಪತ್ರಗಳಲ್ಲಿಯು ಈ ಮೇಲಿನ ಲೆಕ್ಕಶೀರ್ಷಿಕೆಗಳಲ್ಲಿ ಶಿಲ್ಕುಗಳು ಉಳಿದು ಶಾಸನಬದ್ಧ ಲೆಕ್ಕ ಪರಿಶೋಧಕರಿಂದ/ಎಜಿ ಆಡಿಟ್ ತಂಡದವರಿಂದ ಆಡಿಟ್ ಪ್ಯಾರಗಳನ್ನು ನೀಡಲಾಗುತ್ತಿತ್ತು.

ಈ ಮೇಲಿನ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಗ್ರಾಹಕರು RTGS/NEFT ಮೂಲಕ ಪಾವತಿಸಿದ ಮೊತ್ತವು ಪಾವತಿಸಿದ ಸಮಯದಲ್ಲಿ (Real time) ಖಾತೆ ಜಮವಾಗುವಂತೆ ಹಾಗು ಲೆಕ್ಕಶೀರ್ಷಿಕೆ 47.607/46.971/469.747 ರಲ್ಲಿ ಅನವಶ್ಯಕವಾಗಿ ಜಮಾವಾಗುವ ಶಿಲ್ಕುಗಳನ್ನು ತಪ್ಪಿಸುವ ಸಲುವಾಗಿ ಹಾಗು ನಿಗಮದ ಸಿಬ್ಬಂದಿಯ ಹಸ್ತಕ್ಷೇಪವಿಲ್ಲದೆ ಗ್ರಾಹಕರೆ ನೇರವಾಗಿ ನಿಗಮದ ವೆಬ್‌ಸೈಟ್ ಮೂಲಕ/ಬ್ಯಾಂಕ್ ಮೂಲಕ ತಮ್ಮ ಖಾತೆಗೆ ಅನ್‌ಲೈನ್ (RTGS/NEFT) ಮೂಲಕ ವಿದ್ಯುತ್ ಶುಲ್ಕ ಪಾವತಿಸುವಂತೆ ತಕ್ಷಣದಿಂದ ಜಾರಿಗೆ ಬರುವಂತೆ ಅವಕಾಶ ಕಲ್ಪಿಸಲಾಗಿದ್ದು ಈ ಕೆಳಗಿನ ಸೂಚನೆಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಆರ್.ಎ.ಪಿ.ಡಿ.ಆರ್‌ಪಿ ಹಾಗು ನಾನ್ ಆರ್‌ಎಪಿಡಿಆರ್‌ಪಿ ಗ್ರಾಹಕರಿಗೆ ಈ ಮೇಲಿನ ಸೌಲಭ್ಯಗಳನ್ನು ತಕ್ಷಣದಿಂದಲೆ ಜಾರಿಗೆಬರುವಂತೆ ಕಲ್ಪಿಸಲಾಗಿರುತ್ತದೆ.

2. ಗ್ರಾಹಕರು **www.cescmysore.in** & **www.cescmysorepgrs.com** ವೆಬ್‌ಸೈಟ್‌ನ್ನು ಬಳಸಿ OTC/EFT Challan ಪಾವತಿಯ ವಿಧಾನದಲ್ಲಿ RTGS/NEFT ಮೂಲಕ ವಿದ್ಯುತ್ ಶುಲ್ಕ ಪಾವತಿಸಬಹುದಾಗಿದೆ.

3. ಗ್ರಾಹಕರು ನೆಟ್‌ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದಲ್ಲಿ ಗ್ರಾಹಕರು ನೇರವಾಗಿ ಬ್ಯಾಂಕಿನ ವೆಬ್‌ಸೈಟ್ ಮೂಲಕ ವರ್ಚುವಲ್ ಅಕೌಂಟ್ ಐಡಿ ಬಳಸಿ ವಿದ್ಯುತ್ ಶುಲ್ಕ ಪಾವತಿಸಬಹುದಾಗಿದೆ.

4. ನೆಟ್ ಬ್ಯಾಂಕ್ ಸೌಲಭ್ಯ ಹೊಂದಿಲ್ಲದ ಗ್ರಾಹಕರು OTC /EFT Challan ಡೌನ್ ಲೋಡ್ ಮಾಡಿಕೊಂಡು ತಮ್ಮ ವ್ಯವಹಾರವಿರುವ ಬ್ಯಾಂಕ್‌ಗೆ- ಸಲ್ಲಿಸಿ RTGS/NEFT ನ ಮೂಲಕ ವಿದ್ಯುತ್ ಶುಲ್ಕ ಪಾವತಿಸಬಹುದಾಗಿದೆ.

5. RTGS/NEFT ಮೂಲಕ ಪಾವತಿಸಿರುವ ವಿದ್ಯುತ್ ಶುಲ್ಕಕ್ಕೆ ಹಾಲಿ Payment Gate Way ಇರುವ ICICI ಬ್ಯಾಂಕ್ ಖಾತೆಗೆ ಜಮಾಯಾಗಲಿದ್ದು, ಜಮೆಯಾಗಿರುವ ಮೊತ್ತವು T+1 ರಂತೆ ನಿಗಮದ ಖಾತೆಗೆ ವರ್ಗಾವಣೆಯಾಗಲಿರುತ್ತದೆ. ಹಾಗು ಈಗಾಗಲೇ WSS ಮೂಲಕ ಪಾವತಿಯಾಗುತ್ತಿರುವ ವ್ಯವಹಾರಗಳಂತೆ ನಡೆಯಲಿರುತ್ತದೆ.

6. ಗ್ರಾಹಕರು ಈ ಮೇಲಿನಂತೆ ಪಾವತಿಸುವ ವಿದ್ಯುತ್ ಶುಲ್ಕವು ಪಾವತಿಸುವ ಸಮಯಕ್ಕೆ ಅಂದರೆ Real time ನಲ್ಲಿ ಗ್ರಾಹಕರ ಖಾತೆಗೆ(ಆರ್.ಬಿ.ಐ ನಿಯಮಾವಳಿಯಂತೆ NEFT ಮೂಲಕ ಬರುವ ನಿಗದಿತ ಸಮಯದಲ್ಲಿ) ಜಮಾವಾಗಲಿರುತ್ತದೆ.

7. RTGS/NEFT ನ ಮೂಲಕ ಪಾವತಿಸುವ ಮೊತ್ತಕ್ಕೆ ಮತ್ತೊಮ್ಮೆ ರಶೀತಿಯನ್ನು ಡ್ರಾ ಮಾಡುವ ಅವಶ್ಯಕತೆ ಇರುವುದಿಲ್ಲ.

8. Online Payment ಮೂಲಕ ಜಮೆಯಾಗುವ ಮೊತ್ತವನ್ನು ಸಮನ್ವಯಗೊಳಿಸುವ ರೀತಿಯಲ್ಲಿಯೇ RTGS/NEFT ಮೂಲಕ ಜಮಾವಾಗುವ ಮೊತ್ತವನ್ನು ಸಂಪನ್ಮೂಲ ಶಾಖೆಯ ಜೊತೆ ಸಮನ್ವಯಗೊಳಿಸತಕ್ಕದ್ದು,

9. ಈಗಾಗಲೇ ನಿಗಮವು RTGS/NEFT ನ ಮೂಲಕ ಪಾವತಿಸಲು ಅನುಮೋದನೆ ನೀಡಿರುವ ಅವಕಾಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದ್ದು ಗ್ರಾಹಕರು ಕೆ-2 ಪಾವತಿ ಹೊರತುಪಡಿಸಿ ಇನ್ನುಳಿದ ಪಾವತಿಗಳನ್ನು ಉಪವಿಭಾಗದ ಚಾಲ್ತಿರಹಿತ ಖಾತೆಗೆ RTGS/NEFT ಮಾಡುವುದನ್ನು ನಿಷೇದಿಸಲಾಗಿದೆ.

10. ಈಗಾಗಲೇ ಗ್ರಾಹಕರು RTGS/NEFT ನ ಮೂಲಕ ಪಾವತಿಸುತ್ತಿರುವ ಗ್ರಾಹಕರಿಗೆ ಉಪವಿಭಾಗದಿಂದ ಪತ್ರ ವ್ಯವಹರಿಸಿ ಉಪವಿಭಾಗದ ಚಾಲ್ತಿರಹಿತ ಖಾತೆಗೆ RTGS/NEFT ಮಾಡುವ ಬದಲು ಹೊಸ ಸೌಲಭ್ಯವನ್ನು ಬಳಸಿಕೊಂಡು ತಮ್ಮ ಖಾತೆಗೆ ನೇರವಾಗಿ RTGS/NEFT ಮೂಲಕ ವಿದ್ಯುತ್ ಶುಲ್ಕ ಪಾವತಿಸಲು ತಪ್ಪದೆ ತಿಳಿಸಲು ಸೂಚಿಸಲಾಗಿದೆ.

ಈ ಮೇಲಿನ ರೀತಿಯ ಮಾರ್ಗಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ವಿದ್ಯುತ್ ಶುಲ್ಕವನ್ನು RTGS/NEFT ನ ಮೂಲಕ ಸ್ವೀಕರಿಸಲು ಶಾಖಾ/ಉಪವಿಭಾಗ/ವಿಭಾಗಗಳ ಹಂತದಲ್ಲಿ ಹೆಚ್ಚು ಹೆಚ್ಚು ಪ್ರಚಾರಪಡಿಸುವುದು ಹಾಗೂ ಹೆಚ್ಚು ಹೆಚ್ಚು ಕಂದಾಯ ಪಾವತಿಸುವ ಗ್ರಾಹಕರಿಗೆ ಗ್ರಾಹಕರವಾರು ಪತ್ರಗಳನ್ನು ವ್ಯವಹರಿಸಿ RTGS/NEFT ಮೂಲಕ ಕಂದಾಯ ವಸೂಲಾತಿಯನ್ನು ವೃದ್ಧಿಗೊಳಿಸಲು ಅಗತ್ಯ ಕ್ರಮವಹಿಸುವುದು. ಈ ಮೇಲಿನ ಮಾರ್ಗಗಳನ್ನು ಅನುಸರಿಸದೆ ಕರ್ತವ್ಯ ಲೋಪ ಉಂಟು ಮಾಡುವ ನಿಗಮದ ಅಧಿಕಾರಿ/ಸಿಬ್ಬಂದಿಯ ವಿರುದ್ಧ ಕಟ್ಟುನಿಟ್ಟಿನ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಮುಖ್ಯ ಆರ್ಥಿಕ ಅಧಿಕಾರಿ
ಚಾವಿಸನಿನಿ., ಮೈಸೂರು.

ಪ್ರತಿಗಳು:

- ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಮಾಹಿತಿಗಾಗಿ

ಪು.ತಿ.ನೋ.

- ಪ್ರಧಾನ ವ್ಯವಸ್ಥಾಪಕರು, ತಾಂತ್ರಿಕ/ವಾಣಿಜ್ಯ/ಯೋಜನೆ, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
- ನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವೃತ್ತ,
- ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಚಾವಿಸನಿನಿ., ಕಾ ಮತ್ತು ಪಾ ವೃತ್ತ,
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವಿಭಾಗಗಳು ಅಗತ್ಯ ಕ್ರಮಕ್ಕಾಗಿ
- ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಚಾವಿಸನಿನಿ., ಕಾ ಮತ್ತು ಪಾ ವಿಭಾಗಗಳು,
- ವ್ಯ.ನಿ ರವರ ಆಪ್ತ ಕಾರ್ಯದರ್ಶಿಗಳು ರವರಿಗೆ ಕಳುಹಿಸುತ್ತಾ, ಸದರಿ ಮಾಹಿತಿಯನ್ನು ಮಾನ್ಯ ವ್ಯನಿ ರವರ ಗಮನಕ್ಕೆ ತರಲು.